ಹಾಕಿ ಸೀದಾ ಹೊರಗೆ ಬಂದ. ಅಮ್ಮ ಎದ್ದು ಬಾಗಿಲ ಬಳಿ ಹೋಗುವಷ್ಟರಲ್ಲಿ ಅವ ಮಾಯವಾಗಿದ್ದ. ದೇವಕಿಯತ್ತೆ, 'ಎಲ್ಲಿ ಹೋಗ್ತಾನೆ? ಸಿಟ್ಟೆಲ್ಲಾ ಇಳಿದು ಹೊಟ್ಟೆ ಚುರುಗಟ್ಟಿದ ಮೇಲೆ ಬರ್ತಾನೆ ಭಾಗೀ... ಸಣ್ಣಂವ ಅಲ್ವಾ, ಮಧ್ಯಾಹ್ನ ಊಟಕ್ಕೆ ಅವನಿಗಿಷ್ಟದ ಸಬ್ಬಕ್ಕಿ ಸೆಂಡಿಗೆ ಕರಿಯೋಣ ಆಗ್ದಾ? ತಲೆಬಿಸಿ ಮಾಡ್ಬೇಡ' ಎಂದು ಸಮಾಧಾನ ಮಾಡಿದರು ಸಪ್ಪೆ ಮುಖ ಹಾಕಿ ಬಂದ ಅಮ್ಮನಿಗೆ.

ನಿಗಿ ನಿಗಿ ಉರಿಯುತ್ತಿದ್ದ ಪುಟ್ಟ ಜನ್ನು ಬಾವಿಯ ಪಕ್ಕದ ಹಲಸಿನ ಮರದ ಕೆಳಗೆ ಕುಳಿತು ಬಿಕ್ಕಿ ಬಿಕ್ಕಿ ಅತ್ತ. ಅತ್ತು ಅತ್ತು ಸಮಾಧಾನವಾಗುತ್ತಿದ್ದಂತೆ ಮನಸ್ಸು ಮುಂದಿನ ತಂಟೆಗೆ ಸಿದ್ಧವಾಗತೊಡಗಿತು. ತಿಮ್ಮುವನ್ನು ಕರಕೊಂಡು ಹೋಗಿ ಇವತ್ತು ಸಂಜೀವ ಮಾಮನ ತೋಟದಿಂದ ಗೇರುಹಣ್ಣು ಕೊಯ್ಯಬೇಕು, ಗುಡ್ಡದ ನೆತ್ತಿಯಲ್ಲಿರುವ ಕೇಪುಳ ಹಣ್ಣು ಕೆಂಪಾಗಿದ್ದರೆ ಕಿತ್ತು ತರಬೇಕು. ತಿಮ್ಮು ಹೇಳುತ್ತಿದ್ದ: ಕೆರೆ ಹಿಂದಿನ ನೇಜಿ

